ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.4264/2023

| | | | |
|---|---|---|---|
| ಹೆಸರು | : | ರಬ್ಬಾನಿ ಕೆ ಎ | ಸಿ .ಡಬ್ಲ್ಯೂ :3 |
| ತಂದೆ ಹೆಸರು | : | ಅಮೀರ್ ಅಹಮದ್ | ಪಿ .ಡಬ್ಲ್ಯೂ :2 |
| ವಯಸ್ಸು | : | 52 ವರ್ಷ | |
| ಉದ್ಯೋಗ | : | ಮುಖ್ಯ ಪೇದೆ ಗುಬ್ಬಿ ಠಾಣೆ | |
| ವಾಸಸ್ಥಳ | : | ಗುಬ್ಬಿ | |

4

ಸಾಕ್ಷಿಯನ್ನು ದಿಃ 01-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ನಾಲ್ಕು ವರ್ಷಗಳಿಂದ ಗುಬ್ಬಿ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 02-10-2023 ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ -1,2 ಮತ್ತು 4 ರವರೊಡನೆ ನಾನು ಗುಬ್ಬಿ ಪಟ್ಟಣದಲ್ಲಿ ಗಸ್ತಿನಲ್ಲಿದ್ದ ಸಮಯ ಗುಬ್ಬಿ KSRTC ಬಸ್ಸು ನಿಲ್ದಾಣದ ಪಕ್ಕದಲ್ಲಿರುವ ಲಕ್ಕಾಂಬ ವೈನ್ಸ್ ನ ಹಿಂಭಾಗದ ಖಾಲಿ ಜಾಗದಲ್ಲಿ ಅಕ್ರಮವಾಗಿ ಇಬ್ಬರು ವ್ಯಕ್ತಿಗಳು ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಬಾತ್ಮೀದಾರರಿಂದ ಚಾಸಾ -1 ರವರಿಗೆ ಮಾಹಿತಿ ಬಂದಿತ್ತು . ಆ ನಂತರ ನಾವು ಸರ್ಕಾರಿ ಜೀಪ್ ನಂ. KA-06-G-956 ನಲ್ಲಿ ಸದರಿ ಸ್ಥಳಕ್ಕೆ ಹೋದಾಗ ನಮ್ಮನ್ನು ನೋಡಿದ ಕೂಡಲೇ ಆರೋಪಿತರುಗಳು ಓಡಲು ಪ್ರಾರಂಭಿಸಿದರು . ಚಾಸಾ -2 ರವರು 1 ನೇ ಆರೋಪಿತರನ್ನು ಬೆನ್ನಟ್ಟಿ ಹಿಡಿದರು . ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ಶಂಭು , ಬಿಹಾರ ಮೂಲದವನು ಎಂದು ತಿಳಿಸಿದರು . ಓಡಿ ಹೋದ ಮತ್ತೊಬ್ಬ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಶ್ರೀನಿವಾಸ್ ಪ್ರಭುವನಹಳ್ಳಿ ಗ್ರಾಮ ಎಂದು ತಿಳಿಸಿದರು . 1 ನೇ ಆರೋಪಿತರ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ML ನ ಸಿಲ್ವರ್ ಕಪ್ ಕಂಪನಿಯ 19 ಟೆಟ್ರಾ ಪ್ಯಾಕ್‌ಗಳು , 180 ML ನ 8 PM Whiskey 13 ಟೆಟ್ರಾ ಪ್ಯಾಕ್‌ಗಳು , 90 ML ನ 9 OC Whiskey ಪೌಚ್ ಗಳು , 90 ML ನ 14 ರಾಜ Whiskey ಪೌಚ್ ಗಳಿದ್ದವು . ನಾವೆಲ್ಲರೂ ಅವುಗಳೊಡನೆ 1 ನೇ ಆರೋಪಿತರನ್ನು ಠಾಣೆಗೆ ಕರೆತಂದು ಚಾಸಾ -10 ರವರ ಸಮಕ್ಷಮ ಹಾಜರುಪಡಿಸಿ ಆರೋಪಿತರ ವಿರುದ್ದ ವರದಿಯನ್ನು ಸಲ್ಲಿಸಿ ಕ್ರಮ ಕೈಗೊಳ್ಳಲು ಚಾಸಾ -1 ರವರು ಕೋರಿದ್ದಾರೆ . ಠಾಣೆಯಲ್ಲಿ ಮೇಲೆ ಹೇಳಿದ ಮದ್ಯವನ್ನು ವಶಪಡಿಸಿಕೊಳ್ಳುವಾಗ ಪಂಚನಾಮೆ ಬರೆಯಲಾಗಿದೆ . ಆ ಸಮಯ ಚಾಸಾ -5 ಮತ್ತು 6 ರವರು ಪಂಚರಾಗಿ ಹಾಜರಿದ್ದರು . ವಶಪಡಿಸಿಕೊಂಡಿದ್ದ

ವಿವಿಧ ಮದ್ಯದ ಪೌಚುಗಳಲ್ಲಿ ತಲಾ ಒಂದೊಂದು ಪೌಚುಗಳನ್ನು FSL ಕಳುಹಿಸುವ ಸಲುವಾಗಿ ಪ್ರತ್ಯೇಕವಾಗಿ ತೆಗೆದು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಹೊಲೆಯಲಾಯಿತು ಮತ್ತು "S" ಎಂಬ ಅಕ್ಷರದಿಂದ ಮೊಹರು ಹಾಕಲಾಯಿತು ಹಾಗೂ ಉಳಿದ ಮದ್ಯದ ಪೌಚುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಮಾನ್ಯ ನ್ಯಾಯಾಲಯದ ಅನುಮತಿ ಕೋರಿ ಕೋರಿಯ ಪತ್ರ ಸಲ್ಲಿಸಲಾಯಿತು . ಸಂಜೆ 7.45 ರಿಂದ 8.45 ರವರೆಗೆ ಪಂಚನಾಮೆ ಬರೆಯಲಾಯಿತು ನಾನು ಅದಕ್ಕೆ ಸಹಿ ಮಾಡಿದ್ದೇನೆ . ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 ಎಂದು ಸಾಕ್ಷಿ ಸಹಿಯನ್ನು ನಿಪಿ -2 (ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಅಮಾನತ್ತು ಪಡಿಸಿಕೊಂಡ ಮದ್ಯದ ಪೌಚುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ನೋಡಿ ಗುರುತಿಸಿದ್ದಾರೆ .

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ 2 ನೇ ಆರೋಪಿತರು ಗೈರು ಹಾಜರಿದ್ದು ಗುರುತು ಪತ್ತೆಯ ಬಗ್ಗೆ ತಕರಾರು ಇಲ್ಲವೆಂದು ಅವರ ಪರ ವಕೀಲರು ತಿಳಿಸಿದ್ದಾರೆ . ಮೇಲಿನ ವಿಚಾರಗಳನ್ನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಗುಬ್ಬಿ ಠಾಣೆಯಲ್ಲಿ ನಾನು ಗಣಕಯಂತ್ರವನ್ನು ನಿರ್ವಹಿಸುವ ಕೆಲಸ ಮಾಡುತ್ತೇನೆ ಎಂದರೆ ಸರಿ . ಅದೇ ಕಾರಣಕ್ಕಾಗಿ ನನಗೆ ಬೆಳಗಿನಿಂದ ಸಂಜೆಯವರೆಗೂ ಠಾಣೆಯಲ್ಲಿ ಕೆಲಸ ಇರುತ್ತದೆ ಎಂದರೆ ಸರಿ . ಮೇಲೆ ಹೇಳಿದ ದಿನಾಂಕದಂದು ಮೇಲೆ ಹೇಳಿದಂತೆ ಚಾಸಾ -1 ರವರಿಗೆ ಬಾತ್ಮೀದಾರರಿಂದ ಮಾಹಿತಿ ಬಂದಾಗ ಎಲ್ಲಿ ಗಸ್ತು ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ನಿಖರ ಸ್ಥಳ ಹೇಳಲಾಗುವುದಿಲ್ಲ , ಗುಬ್ಬಿ ಪಟ್ಟಣದಲ್ಲಿ ಗಸ್ತು ಹೋಗುತ್ತಿರುವಾಗ ಮಾಹಿತಿ ಬಂತು ಎಂದು ತಿಳಿಸಿದ್ದಾರೆ . ಮೇಲೆ ಹೇಳಿದ ಲಕ್ಕಾಂಬ ವೈನ್ಸ್ ನ ಹಿಂಭಾಗದ ಕೃತ್ಯ ಸ್ಥಳದ ಚಕ್ಕುಬಂದಿ ಹೇಳಲು ನೆನಪಾಗುತ್ತಿಲ್ಲ . ನಾನು ಹೇಳುವಂತೆ ಮೇಲೆ ಹೇಳಿದ ದಿನಾಂಕದಂದು ನಾನು ಚಾಸಾ -1 ರವರೊಡನೆ ಯಾವುದೇ ಗಸ್ತು ಕರ್ತವ್ಯಕ್ಕೆ ಹೋಗಿರಲಿಲ್ಲ ಆರೋಪಿತರು ಯಾವುದೇ ಮದ್ಯ ಮಾರಾಟ ಮಾಡುತ್ತಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಆ ರೀತಿ ಗಸ್ತು ಕರ್ತವ್ಯಕ್ಕೆ ಹೋಗದಿದ್ದ ಕಾರಣ ಚಕ್ಕುಬಂದಿ ಹೇಳಲು ನೆನಪಾಗುತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮೇಲೆ ಹೇಳಿದ ದಿನಾಂಕದಂದು ನಾವು ಲಕ್ಕಾಂಬ ವೈನ್ಸ್ ನ ಹಿಂಭಾಗದ ಸ್ಥಳಕ್ಕೆ ಹೋಗಿದ್ದೆವು ಎಂದು ಮತ್ತು ಅಲ್ಲಿ ಆರೋಪಿತರುಗಳು ಅಕ್ರಮ ಮದ್ಯ ಮಾರಾಟವನ್ನು ಮಾಡುತ್ತಿದ್ದರು ಎಂದು ತೋರಿಸಲು ಸ್ಥಳದಲ್ಲಿ

ಯಾವುದೇ ದಾಖಲೆಗಳನ್ನು ಮಾಡಿಕೊಂಡಿಲ್ಲ . ನಮ್ಮ ಠಾಣಾ ಜೀಪ್ ಗೆ ಚಾಲಕನನ್ನು DRP ಯಿಂದ ನೇಮಿಸಲಾಗಿತ್ತು ಎಂದರೆ ಸರಿ . ಮೇಲೆ ಹೇಳಿದ ದಿನಾಂಕದಂದು ನಮ್ಮ ಠಾಣಾ ಜೀಪ್ ಗೆ ಯಾರು ಚಾಲಕರಾಗಿದ್ದರು ಎಂದು ಹೇಳಲು ನೆನಪಾಗುತ್ತಿಲ್ಲ . ನಾನು ಆ ರೀತಿ ಗಸ್ತು ಕರ್ತವ್ಯಕ್ಕೆ ಹೋಗದಿದ್ದ ಕಾರಣ ನನಗೆ ಜೀಪ್ ಚಾಲಕ ಯಾರೆಂದು ಗೊತ್ತಿಲ್ಲ ಎಂದರೆ ಸರಿಯಲ್ಲ .

ಮೇಲೆ ಹೇಳಿದಂತೆ ಆರೋಪಿತರುಗಳು ಅಕ್ರಮ ಮದ್ಯ ಇಟ್ಟುಕೊಂಡಿದ್ದರು ಎಂದು ಹೇಳುವ ಚೀಲವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ . ಠಾಣೆಯಲ್ಲಿ ಮೇಲಾಧಿಕಾರಿಗಳ ಜೊತೆ ಗಸ್ತು ಕರ್ತವ್ಯಕ್ಕೆಂದು ಕ್ರೈಮ್ ಸಿಬ್ಬಂದಿಗಳು ಮತ್ತು ಕಾನ್ಸ್ ಟೇಬಲ್ ಗಳು ಹೋಗುತ್ತಾರೆ ಎಂದರೆ ಸರಿ . ಮು ಮಾ -1 ರ ಬ್ಯಾಚ್ ನಂಬರ್, ತಯಾರಿಕ ದಿನಾಂಕ ಹೇಳಲು ನೆನಪಾಗುತ್ತಿಲ್ಲ . ಆರೋಪಿತರುಗಳು ನಾನು ಹೇಳುವಂತಹ ವಿವಿಧ ಕಂಪನಿಯ ಮದ್ಯದ ಪೌಚುಗಳನ್ನು ದಸ್ತಾನು ಇಟ್ಟುಕೊಂಡಿರಲಿಲ್ಲ ಮತ್ತು ಮಾರಾಟ ಕೂಡ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ಮು ಮಾ -1 ರ ಪೌಚ್ ಗಳನ್ನು ಇಟ್ಟಿದ್ದ ಬಿಳಿಯ ಚೀಲಗಳ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ . ನಾನು ಸ್ಥಳದಲ್ಲಿ ಹಾಜರಿರದಿದ್ದ ಕಾರಣ ನನ್ನ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಪಂಚರ ಸಹಿಯನ್ನು ಮಾತ್ರ ಪಡೆಯಲಾಗುತ್ತದೆ ಎಂದು ತಿಳಿಸಿದ್ದಾರೆ . ಪ್ರಕರಣಕ್ಕಾಗಿ ಪಂಚನಾಮೆಯನ್ನು ಸೃಷ್ಟಿಸಿದ್ದು ನಾನು ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಇದೇ ಮೊದಲು ಬಾರಿಗೆ ನ್ಯಾಯಾಲಯದಲ್ಲಿ ಮು ಮಾ -1 ನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ . ಮದ್ಯದ ಅಂಗಡಿಗಳ ಬಳಿ ಬಿದ್ದಿರುವ ಖಾಲಿ ಟೆಟ್ರಾ ಪ್ಯಾಕ್ ಗಳನ್ನು ಬಳಸಿಕೊಂಡು ಆರೋಪಿತರುಗಳ ವಿರುದ್ಧ ಈ ಪ್ರಕರಣ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಪ್ರಕರಣಕ್ಕಾಗಿ ಪೂರಕವಾಗಿ ನನ್ನ ಹೇಳಿಕೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ . ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿವರಗಳನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.